

## ಗುಂಡನ ಉಳಿತಾಯ

ಗುಂಡ ತನ್ನ ಸಂಬಂಧಿಕರೊಬ್ಬರನ್ನು ಕರೆತರಲು ಮಂಗಳೂರು ರೈಲು ನಿಲ್ದಾಣಕ್ಕೆ ಹೋಗಿದ್ದ. ಅಲ್ಲಿ ಟಿಕೆಟ್ ಕೌಂಟರ್ ಬಳಿ ಹೋಗಿ ಒಂದು ಪ್ಲಾಟ್‌ಫಾರಂ ಟಿಕೆಟ್ ಕೇಳಿದ. ಕ್ಲರ್ಕ್ 50 ರೂಪಾಯಿ (ಹೊಸ ಬೆಲೆ) ಅಂದ.

ಗುಂಡ ಕೊಂಚ ಯೋಚಿಸಿ 20 ರೂಪಾಯಿ ತೆತ್ತು ಸುರತ್ಕಲ್‌ಗೆ ಒಂದು ಟಿಕೆಟ್ ಖರೀದಿಸಿದ. ನಂತರ ಪ್ಲಾಟ್‌ಫಾರಂಗೆ ಹೋಗಿ ಸಂಬಂಧಿಕರನ್ನು ಕರೆತಂದು ನಿಲ್ದಾಣದಿಂದ ಹೊರಹೋಗುವಾಗ ಪುನಃ ಕೌಂಟರ್‌ಗೆ ಹೋಗಿ ಸುರತ್ಕಲ್‌ನ ಟಿಕೆಟ್ ಕ್ಯಾನ್ಸಲ್ ಮಾಡಿಸಿ 10 ರೂಪಾಯಿ ಮರಳಿ ಪಡೆದು ಜೇಬಿಗಿಳಿಸಿಕೊಂಡ!

## ಕೋಲೆಂದು ಹಾವು ಹಿಡಿದ ಗುಂಡ

**ಪುಂಡ:** ಯಾಕೋ ಗುಂಡ, ತುಂಬಾ ಗಾಬರಿಯಲ್ಲಿರುವಂತಿದೆ?

**ಗುಂಡ:** ಹಾಗೇನೂ ಇಲ್ಲ, ಒಂದು ಗೊಂದಲವಾಗಿದೆ ಅಷ್ಟೆ.

**ಪುಂಡ:** ಏನದು ಅಂಥಾ ಗೊಂದಲ?

**ಗುಂಡ:** ನಾನು ರಸ್ತೆಯಲ್ಲಿ ಹೋಗುತ್ತಿದ್ದಾಗ ಏನೋ ಕಂಡ ಹಾಗಾಯಿತು, ಬಳಿಕ ಅದು ಹಾವು ಎಂದೆಣಿಸಿದ್ದೆ. ಆದರೆ ಅದು ನಿಜವಾಗಿ ಕೋಲಾಗಿತ್ತು.

**ಪುಂಡ:** ಅಷ್ಟಕ್ಕೇ ಇಷ್ಟು ಗಾಬರಿಯಾಗುವುದೇ?

**ಗುಂಡ:** ಆದರೆ, ನಾನು ಆ ಹಾವನ್ನು ಹೊಡೆಯಲೆಂದು ಎತ್ತಿದ್ದ ಕೋಲು ಮಾತ್ರ ನಿಜವಾದ ಹಾವಾಗಿತ್ತು ಮಾರಾಯ!




ಚಳಿಗಾಲ ಮುಗಿದ ಮೇಲೆ ಹೊಸದಾಗಿ ಅಮೃತ ಕಾಲ ಬಂದು ಬಿಡುತ್ತಾ ತಾತ!

## ಮಾಲೀಕರ ಮಗನ ಜಾಣತನ

ಕಾಲೇಜು ವಿದ್ಯಾರ್ಥಿನಿ ತನ್ನ ಮನೆಯ ಎದುರಿನಲ್ಲಿರುವ ಅಂಗಡಿಗೆ ಒಡೆದ ತೆಂಗಿನಕಾಯಿ ತೆಗೆದುಕೊಂಡು ಹೋದಳು. ಅಲ್ಲಿ ಅಂಗಡಿ ಮಾಲೀಕರ ಮಗನನ್ನು ಬಿಟ್ಟರೆ ಬೇರೆ ಯಾರೂ ಇರಲಿಲ್ಲ...

**ವಿದ್ಯಾರ್ಥಿನಿ:** (ನಸು ನಾಚುತ್ತಾ) ರೀ... ನನಗೆ ನಿಮ್ಮಲ್ಲಿ ಸ್ವಲ್ಪ ಮಾತಾಡುವುದಿದೆ.

**ಮಾಲೀಕರ ಮಗ:** ಹೇಳಿ.

**ವಿದ್ಯಾರ್ಥಿನಿ:** (ಇನ್ನಷ್ಟು ನಾಚುತ್ತಾ) ನೀವು ತುಂಬಾ ಚೆಂದ ಕಾಣಿಸುತ್ತಿದ್ದೀರಿ. ನೀವೆಂದರೆ ನನಗೆ ಇಷ್ಟ.

**ಮಾಲೀಕರ ಮಗ:** (ಶಾಂತ ಚಿತ್ತನಾಗಿ) ಅದೇನೇ ಇರಲಿ, ಒಮ್ಮೆ ಬಿಕರಿಯಾದ ತೆಂಗಿನ ಕಾಯಿಯನ್ನು ಒಡೆದ ಬಳಿಕ ಯಾವುದೇ ಕಾರಣಕ್ಕೂ ಹಿಂಪಡೆಯುವುದಿಲ್ಲ!

## ದೆವ್ವವಾದರೂ ಬದಲಾಗದ ಹೆಂಡತಿ

ಪತಿ ಪತ್ನಿ ಇಬ್ಬರೂ ಕಾರು ಅಪಘಾತವೊಂದರಲ್ಲಿ ಅಸುನೀಗಿದರು. ಪತಿ ದೆವ್ವದ ರೂಪ ತಾಳಿದರೆ, ಪತ್ನಿ ಯಕ್ಷಿಣಿ ರೂಪ ಪಡೆದಳು. ಸ್ವಲ್ಪ ಸಮಯದ ನಂತರ ಇಬ್ಬರೂ ಪರಸ್ಪರ ಭೇಟಿಯಾಗುವ ಸಂದರ್ಭ ಬಂತು. ಪತ್ನಿ ಪತಿಯನ್ನು ಕಂಡು ಅಚ್ಚರಿಪಡುತ್ತಾ ಹೇಳಿದಳು, 'ರೀ... ದೆವ್ವವಾದ ಬಳಿಕ ನೀವು ಬೇರೆಯೇ ತರಹ ಕಾಣಿಸುತ್ತಿದ್ದೀರಿ'. ಪತಿ ಪ್ರತಿಕ್ರಿಯಿಸುತ್ತಾ ಉಸುರಿದ, 'ಹೌದು ಕಣೆ, ಆದರೆ ನೀನು ಮಾತ್ರ ಸ್ವಲ್ಪವೂ ಬದಲಾಗಿಲ್ಲ'!

## ಪತ್ನಿಗೆ ಪತಿ ತಿರುಮಂತ್ರ

**ಪತಿ:** ಯಾಕೋ ತಲೆ ನೋಯುತ್ತಿದೆ, ಸ್ವಲ್ಪ ಚಹಾ ಮಾಡಿಕೊಡು.

**ಪತ್ನಿ:** ಇಲ್ಲ ರೀ... ಬೇಕಿದ್ದರೆ ನೀವೇ ಮಾಡಿಕೊಳ್ಳಿ. ನನಗೂ ಕುತ್ತಿಗೆ ನೋಯುತ್ತಿದೆ.

**ಪತಿ:** ಸರಿ, ಹಾಗಾದರೆ ನೀನು ನನ್ನ ತಲೆ ಒತ್ತು ಮತ್ತು ನಾನು ನಿನ್ನ ಕುತ್ತಿಗೆ ಒತ್ತುತ್ತೇನೆ.

**ಪತ್ನಿ:** ರೀ... ಯಾವ ಚಹಾ ಮಾಡಲಿ, ಗ್ರೀನ್ ಟೀ ಅಥವಾ ಮಸಾಲೆ ಚಹಾ?

## ಬಹುಮಾನ ಬೇಕಾ ಬಹುಮಾನ...

**ಸಂತಾ:** ನನ್ನ ಇಚ್ಛೆ ಪೂರೈಸುವವರಿಗೆ ನಾನು ಒಂದು ಲಕ್ಷ ರೂಪಾಯಿ ನೀಡುತ್ತೇನೆ.

**ಬಂತಾ:** ಹೇಳು, ಏನು ನಿನ್ನ ಇಚ್ಛೆ? ನಾನು ಪೂರೈಸುವೆ.

**ಸಂತಾ:** ನನಗೆ ಎರಡು ಲಕ್ಷ ರೂಪಾಯಿ ಬೇಕು!

## ಫ್ಯಾಷನ್ ಅಲ್ಲ ಅನಿವಾರ್ಯತೆ

**ಪುಂಡ:** ಇದೇನೋ ನಿನ್ನ ಫ್ಯಾಷನ್? ಎದುರುಗಡೆ ಇನ್‌ಶರ್ಟ್ ಮಾಡಿ ಹಿಂದೆಗಡೆ ಹಾಗೇ ಬಿಟ್ಟಿದ್ದೀಯಲ್ಲೋ?

**ಗುಂಡ:** ಫ್ಯಾಷನ್ ಗೀಷನ್ ಏನೂ ಇಲ್ಲ ಕಣೋ. ಎದುರುಗಡೆ ಶರ್ಟ್ ಹರಿದಿದೆ ಮತ್ತು ಹಿಂದುಗಡೆ ಪ್ಯಾಂಟ್ ಹರಿದಿದೆ!

## ಪ್ರೇಮಾಯಣಕ್ಕೆ ಅಡ್ಡಿಯಾದ ಛತ್ರಿ

**ಹುಡುಗಿ (ಪ್ರೇಮ ಪರವಶತೆಯಿಂದ):** ಬಾನಲ್ಲಿ ಸಿಡಿಲು ಗುಡುಗಿದರೆ ನಿನ್ನ ನೆನಪಾಗುತ್ತದೆ; ಮೋಡ ಕವಿದ ವಾತಾವರಣದಲ್ಲಿ ನಿನ್ನ ನೆನಪಾಗುತ್ತದೆ; ಮಳೆಯ ಹನಿ ಹನಿಗಳಲ್ಲಿ ನಿನ್ನ ನೆನಪಾಗುತ್ತದೆ; ಭೋರೆಂದು ಸುರಿವ ಮಳೆಯಲ್ಲಂತೂ ತುಂಬಾನೆ ನೆನಪಾಗುತ್ತದೆ.

**ಹುಡುಗ:** ಗೊತ್ತು ಕಣೆ, ನಿನ್ನ ಛತ್ರಿ ನನ್ನ ಬಳಿಯೇ ಉಳಿದಿದೆ ಅಂತ. ಆದಷ್ಟು ಬೇಗ ಹಿಂತಿರುಗಿಸುತ್ತೇನೆ!

ಸಂಗ್ರಹ: **ರಮಣ್ ಶೆಟ್ಟಿ ರೆಂಜಾಳ್, ಮುಂಬೈ**


